ಅ) ರಾಜ್ಯದಲ್ಲಿ ವಿವಿಧ ತಳಿಗಳ ಮೀನುಮರಿಗಳಿಗೆ ಎಷ್ಟು ಬೇಡಿಕೆ ಇದೆ;

ಆ) ಮೀನುಮರಿ ಉತ್ಪಾದನೆ ಹೆಚ್ಚಳ, ಆಧುನೀಕರಣ ಮತ್ತು ಕೊಳಗಳ ನಿರ್ಮಾಣಕ್ಕಾಗಿ ಕಳೆದ ಸಾಲಿನಲ್ಲಿ ನಿಗದಿಪಡಿಸಿದ ಮತ್ತು ಬಿಡುಗಡೆಯಾದ ಹಣ ಎಷ್ಟು;

ಇ) ಈ ಉದ್ದೇಶಕ್ಕಾಗಿ ನಬಾರ್ಡ್‌ನಿಂದ ಹಣಕಾಸಿನ ನೆರವು ಪಡೆಯಲಾಗಿದೆಯೇ; ಪಡೆಯಲಾಗಿದ್ದರೆ, ಪಡೆದ ಮೊತ್ತ ಎಷ್ಟು; ಖರ್ಚಾದ ಹಣ ಎಷ್ಟು;

ಈ) ರಾಜ್ಯದ ಯಾವ ಸ್ಥಳಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) ರಾಜ್ಯದಲ್ಲಿನ ಎಲ್ಲಾ ಜಲ ಸಂಪನ್ಮೂಲಗಳಲ್ಲಿ ವೈಜ್ಞಾನಿಕವಾಗಿ ಮೀನುಗಾರಿಕೆ ಅಭಿವೃದ್ಧಿ ಕೈಗೊಳ್ಳಲು ವಿವಿಧ ತಳಿಗಳ 40 ಕೋಟಿ ಬಿತ್ತನೆ ಮರಿಗಳ ಬೇಡಿಕೆ ಇರುತ್ತದೆ.

ಆ) ಮೀನುಮರಿ ಉತ್ಪಾದನೆ ಹೆಚ್ಚಳ, ಆಧುನೀಕರಣ ಮತ್ತು ಕೊಳಗಳ ನಿರ್ಮಾಣಕ್ಕಾಗಿ ಕಳೆದ ಸಾಲಿನಲ್ಲಿ ನಿಗದಿಪಡಿಸಿದ ಮೊತ್ತ ಮತ್ತು ಬಿಡುಗಡೆಯಾದ ಹಣ ಅನುಕ್ರಮವಾಗಿ ರೂ. 30.97 ಲಕ್ಷ ಮತ್ತು ರೂ. 27.36 ಲಕ್ಷಗಳಾಗಿರುತ್ತದೆ.

ಇ) ಆರ್.ಐ.ಡಿ.ಎಫ್ ಯೋಜನೆಯಡಿ ಸುಮಾರು ರೂ. 978.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ರಾಜ್ಯದ 13 ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳನ್ನು ಆಧುನೀಕರಿಸಲು ನಬಾರ್ಡ್ ಸಂಸ್ಥೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ನೀರಾವರಿ ಇಲಾಖೆಯಿಂದ ಅಂದಾಜು ಪಟ್ಟಿಗಳ ತಯಾರಿಕೆ ಕ್ರಮ ನಡೆಯುತ್ತಿದೆ, ಆದಾಗ್ಯೂ, ಇದುವರೆವಿಗೆ ಹಣಕಾಸಿನ ನೆರವು ಪಡೆದಿರುವುದಿಲ್ಲ.

ಈ) ಈ ಕಾರ್ಯಕ್ರಮವನ್ನು ಕೋಲಾರ ಜಿಲ್ಲೆಯ 1) ಶಿಡ್ಲಘಟ್ಟ ಮತ್ತು 2) ತಿಪ್ಪಗಾನಹಳ್ಳಿಯಲ್ಲಿ, ಬೆಂಗಳೂರು ನಗರ ಜಿಲ್ಲೆಯ 3) ಹೆಸರಗಟ್ಟದಲ್ಲಿ, ದಾವಣಗೆರೆ ಜಿಲ್ಲೆಯ 4) ಶಾಂತಿಸಾಗರದಲ್ಲಿ, ಕೊಪ್ಪಳ ಜಿಲ್ಲೆಯ 5) ಶಿವಪುರ ಮತ್ತು 6) ಮುನಿರಾಬಾದಗಳಲ್ಲಿ, ಬಳ್ಳಾರಿ ಜಿಲ್ಲೆಯ 7) ಹಗರಿಬೊಮ್ಮನಹಳ್ಳಿ, ಬಿಜಾಪುರ ಜಿಲ್ಲೆಯ 8) ನಾರಾಯಣಪುರದಲ್ಲಿ, ಬೆಳಗಾಂ ಜಿಲ್ಲೆಯ 9) ಸವದತ್ತಿಯಲ್ಲಿ, ತುಮಕೂರು ಜಿಲ್ಲೆಯ 10) ಮಾರ್ಕೋನಹಳ್ಳಿ, ಶಿವಮೊಗ್ಗ ಜಿಲ್ಲೆಯ 11) ಬಿ.ಆರ್.ಪಿ. ಮತ್ತು 12) ರಾಷ್ಟ್ರೀಯ ಬಂದ್ ಬ್ರೀಡಿಂಗ್ ಕೇಂದ್ರಗಳಲ್ಲಿ ಮತ್ತು ಚಿತ್ರದುರ್ಗ ಜಿಲ್ಲೆಯ ವಿ.ವಿ. ಸಾಗರದಲ್ಲಿ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ತಾಲ್ಲೂಕ ಮಟ್ಟದಲ್ಲಿ ಪ್ರಾಣಿ ರೋಗ ಪ್ರಯೋಗಾಲಯ ಸ್ಥಾಪನೆ

3621(4362) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಾಲ್ಲೂಕು ಮಟ್ಟದಲ್ಲಿ ಪ್ರಾಣಿರೋಗ ಪ್ರಯೋಗಾಲಯಗಳನ್ನು ಸರ್ಕಾರವು ಯೋಚಿಸಿರುವಂತೆ ರಾಜ್ಯದಲ್ಲಿ ಸ್ಥಾಪಿಸಲಾಗಿದೆಯೇ;

ಆ) ಸ್ಥಾಪಿಸಿದ್ದಲ್ಲಿ ಯಾವ ತಾಲ್ಲೂಕುಗಳಲ್ಲಿ ಸ್ಥಾಪಿಸಲಾಗಿದೆ;

ಇ) ಈ ಉದ್ದೇಶಕ್ಕೆ ನಿಗಧಿಪಡಿಸಿದ ಮತ್ತು ಬಿಡುಗಡೆಯಾದ ಹಣ ಎಷ್ಟು;

ಈ) ಸ್ಥಾಪಿಸದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) 50 ತಾಲ್ಲೂಕುಗಳಲ್ಲಿ ಜಾನುವಾರು ರೋಗ ನಿರ್ಣಯ ಪ್ರಯೋಗಾಲಯ ಸ್ಥಾಪಿಸಲು ಮಂಜೂರಾತಿ ದೊರಕಿದೆ. ಸೌಕರ್ಯಗಳನ್ನು ಒದಗಿಸಿಕೊಡಬೇಕಾಗಿದೆ.

ಆ) ಮಂಜೂರಾಗಿರುವ ತಾಲ್ಲೂಕು ಮಟ್ಟದ ಪ್ರಾಣಿರೋಗ ಪ್ರಯೋಗಾಲಯದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕಳೆದ ಎರಡು ವರ್ಷಗಳಲ್ಲಿ ನಿಗದಿಪಡಿಸಿರುವುದು ಒಟ್ಟು ರೂ. 114.00 ಲಕ್ಷ ಮತ್ತು ಬಿಡುಗಡೆಯಾಗಿರುವುದು ರೂ. 27.00 ಲಕ್ಷ.

ಈ) ಹೊಸ ಉಪಕರಣಗಳನ್ನು ಖರೀದಿಸುವ ಮತ್ತು ಅಂತಿಮಗೊಳಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು
1	2	3
1.	ಬೆಂಗಳೂರು ಗ್ರಾಮಾಂತರ	1. ರಾಮನಗರ 2. ದೊಡ್ಡ ಬಳ್ಳಾಪುರ
2.	ಕೋಲಾರ	3. ಮುಳಬಾಗಿಲು 4. ಚಿಕ್ಕಬಳ್ಳಾಪುರ
3.	ತುಮಕೂರು	5. ಕುಣಿಗಲ್ 6. ಮಧುಗಿರಿ 7. ತಿಪಟೂರು
4.	ಚಿತ್ರದುರ್ಗ	8. ಹಿರಿಯೂರು
5.	ದಾವಣಗೆರೆ	9. ಹರಿಹರ 10. ಹರಪನಹಳ್ಳಿ
6.	ಶಿವಮೊಗ್ಗ	11. ಸೊರಬ 12. ಸಾಗರ
7.	ಚಾಮರಾಜನಗರ	13. ಗುಂಡ್ಲುಪೇಟೆ
8.	ಮೈಸೂರು	14. ಹೆಮ್ಮರಗಾಲ 15. ನಂಜನಗೂಡು
9.	ಮಂಡ್ಯ	16. ಮದ್ದೂರು 17. ಪಾಂಡವಪುರ
10.	ಹಾಸನ	18. ಅರಸೀಕೆರೆ 19. ಸಕಲೇಶಪುರ
11.	ಚಿಕ್ಕಮಗಳೂರು	20. ಮೂಡಿಗೆರೆ 21. ತರೀಕೆರೆ
12.	ಕೊಡಗು	22. ಸೋಮವಾರಪೇಟೆ
13.	ದಕ್ಷಿಣ ಕನ್ನಡ ಜಿಲ್ಲೆ	23. ಬಂಟ್ವಾಳ 24. ಪುತ್ತೂರು
14.	ಉಡುಪಿ	25. ಕುಂದಾಪುರ
15.	ಬೆಳಗಾಂ	26. ಖಾನಾಪುರ 27. ಬೈಲಹೊಂಗಲ 28. ಚಿಕ್ಕೋಡಿ
16.	ಬಿಜಾಪುರ	29. ಮುದ್ದೇಬಿಹಾಳ 30. ಇಂಡಿ
17.	ಬಾಗಲಕೋಟೆ	31. ಹುನಗುಂದ 32. ಜಮಖಂಡಿ
18.	ಧಾರವಾಡ	33. ಹುಬ್ಬಳ್ಳಿ
19.	ಹಾವೇರಿ	34. ಹಾನಗಲ್ 35. ಸವಣೂರು
20.	ಗದಗ	36. ರೋಣ
21.	ಉತ್ತರ ಕನ್ನಡ ಜಿಲ್ಲೆ	37. ಸಿದ್ದಾಪುರ 38. ಸಿರ್ಸಿ 39. ಕುಮಟ 40 ಭಟ್ಕಳ
22.	ಗುಲ್ಬರ್ಗಾ	41. ಜೇವರ್ಗಿ 42. ಸೇಡಂ 43. ಯಾದಗೀರ್
23.	ಬೀದರ್	44. ಹುಮ್ನಾಬಾದ್ 45. ಬಸವ ಕಲ್ಯಾಣ್

1	2	3
24.	ಬಳ್ಳಾರಿ	46. ಸಿರಗುಪ್ಪ 47. ಹೊಸಪೇಟೆ
25.	ರಾಯಚೂರು	48. ಮಾನ್ವಿ 49. ಲಿಂಗಸೂಗೂರು
26.	ಕೊಪ್ಪಳ	50. ಯಲಬುರ್ಗಾ

ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಮಸೀದಿ ನವೀಕರಣಕ್ಕಾಗಿ ಧನ ಸಹಾಯ

3622(4363) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಸೀದಿಗಳ ನವೀಕರಣಕ್ಕಾಗಿ ಕಳೆದ ಸಾಲಿನಲ್ಲಿ ನಿಗಧಿಪಡಿಸಿದ ಹಣ ಎಷ್ಟು; ಬಿಡುಗಡೆಯಾದ ಹಣ ಎಷ್ಟು;

ಆ) ಯಾವ ಜಿಲ್ಲೆಗಳಿಗೆ ಕಳೆದ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಇ) ಶಿವಮೊಗ್ಗ ಜಿಲ್ಲೆಯ ಯಾವ ಯಾವ ಮಸೀದಿಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಈ) ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನಿಂದ ಧನ ಸಹಾಯಕ್ಕಾಗಿ ಎಷ್ಟು ಅರ್ಜಿಗಳು ಬಂದಿವೆ. ಯಾವ ಯಾವ ಮಸೀದಿಗೆ ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು) :

ಅ) 2002–2003ನೇ ಸಾಲಿನಲ್ಲಿ ಒಟ್ಟು ರೂ. 500–00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, ಅದರಲ್ಲಿ ರೂ. 400.00 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ.

ಆ) ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ (ಅನುಬಂಧ – 1)

ಇ) ಅನುಬಂಧ –2 ಪಟ್ಟಿಯಲ್ಲಿ ತೋರಿಸಲಾಗಿದೆ.

ಈ) ಒಟ್ಟು 21 ಅರ್ಜಿಗಳು ಸ್ವೀಕೃತವಾಗಿರುವುವು. ಈ ಪೈಕಿ ಈ ಕೆಳಕಂಡ ಸಂಸ್ಥೆಗಳಿಗೆ ಅನುದಾನ ಲಭ್ಯತೆ ಅನುಸಾರ 2002–2003ನೇ ಸಾಲಿನಲ್ಲಿ ಅನುದಾನ ಮಂಜೂರು ಮಾಡಲಾಗಿದೆ.

ತೀರ್ಥಹಳ್ಳಿ ತಾಲ್ಲೂಕು:

		ರೂ.ಗಳಲ್ಲಿ
1)	ಬದ್ರಿಯಾ ಜುಮ್ಮಾ ಮಸೀದಿ, ಸೋನಾಬರು, ತೀರ್ಥಹಳ್ಳಿ	20,000–00
2)	ಜಾಮಿಯಾ ಮಸೀದಿ, ಹೊನಚಂದ್ರ ಕಟ್ಟಿ	20,000–00
3)	ಅರಬ್ಬಿಮುದ್ರೆ ಸಾ, ಹೂನಚಂದ್ರ ಕಟ್ಟಿ	20,000–00

ಹೊಸನಗರ ತಾಲ್ಲೂಕು:

1)	ಬದ್ರಿಯಾ ಜುಮ್ಮಾ ಮಸೀದಿ ಶಾಫಿ ಜಮಾತ್, ಹೊಸನಗರ	20,000–00

Annexure - I

Grant-in-Aid amount sanctioned to Wakf Institutions for the years 2002-2003

Sl.No.	Name of the District	2002-2003	Instn
1	2	3	4
1	Bangalore Urban	1125000.00	41
2	Bangalore Rural	930000.00	40